ದಿನಾಂಕಃ 29-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ</u>- 1 ನೇ ಆರೋಪಿ ಪರವಾಗಿ ಶ್ರೀ.ಎಸ್.ಆರ್.ಆರ್. ವಕೀಲರಿಂದಃ-**

1 ನೇ ಆರೋಪಿ ನಾನು ಬರುವುದಕ್ಕೂ ಮುಂಚೆಯೇ ಬಿಲ್ ಕಲೆಕ್ಟರ್ ಆಗಿ ಕೆಲಸ ಮಾಡುತ್ತಿದ್ದರು. ನಾನು ಬರುವುದಕ್ಕೂ ಮುಂಚೆ ನಾನು ಬಂದ ನಂತರ ಯಾರಾದರೂ ನಾವು ತೆರಿಗೆಯನ್ನು ಬಿಲ್ ಕಲೆಕ್ಟರ್ ಗೆ ಕೊಟ್ಟಿದ್ದೇವೆ ಅದು ಪಂಚಾಯಿತಿಗೆ ಪಾವತಿ ಆಗಿಲ್ಲ ಎಂದು ನನ್ನ ಅವಧಿಯಲ್ಲಿ ದೂರು ಬಂದಿಲ್ಲ, ಹಿಂದೆ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಬ್ಯಾಲ್ಯ ಪಂಚಾಯಿತಿಗೆ ಬಂದಾಗ ಆ ರೀತಿ ಯಾವುದೇ ದೂರು ಇರಲಿಲ್ಲ. ಖರ ವಸೂಲಿಗೆ ಸಂಬಂಧಪಟ್ಟಂತೆ ನಮ್ಮ ಪಂಚಾಯಿತಿಯಲ್ಲಿ ಖರ ವಸೂಲಿಯ ನಮೂನೆ ಇರುತ್ತದೆ ಎಂದರೆ ಸರಿ. ಮೂಲ ಪ್ರತಿ ನಮ್ಮ ಕಚೇರಿಯಲ್ಲಿರುತ್ತದೆ. ಕಾರ್ಬನ್ ಕಾಪಿಯನ್ನು ಮಾತ್ರ ಯಾರು ಖರ ಪಾವತಿ ಮಾಡುತ್ತಾರೋ ಅವರಿಗೆ ಕೊಡುತ್ತೇವೆ. ಖರವನ್ನು ಪ್ರತಿದಿನ ನಮ್ಮ ಅಕೌಂಟೆಂಟ್ ತೆಗೆದುಕೊಳ್ಳುತ್ತಾರೆ. ಖರ ವಸೂಲಿ ಮಾಡಲು ಅಕೌಂಟೆಂಟ್, ಬಿಲ್ ಕಲೆಕ್ಟರ್, ಡಿ ಗ್ರೂಪ್ ನೌಕರ ಹೋಗುತ್ತಾರೆ ಎಂದರೆ ಸರಿಯಲ್ಲ. ಸ್ವತಃ ಮುಂದುವರೆದು ಹೇಳುತ್ತಾರೆ, ಬಿಲ್ ಕಲೆಕ್ಟರ್ ಮಾತ್ರ ಹೋಗುತ್ತಾರೆ . ಖರವನ್ನು ಬಿಲ್ ಕಲೆಕ್ಟರ್ ಪಡೆದು ಅದನ್ನು ಅಕೌಂಟೆಂಟ್ ಗೆ ಕೊಟ್ಟು ಪಿ.ಡಿ.ಒ. ಮೂಲಕ ಬ್ಯಾಂಕ್ ಖಾತೆಗೆ ಜಮಾ ಆಗುತ್ತದೆ ಎಂದರೆ ಸರಿಯಲ್ಲ. ಸ್ವತಃ ಮುಂದುವರೆದು

ಹೇಳುತ್ತಾರೆ, ನೇರವಾಗಿ ಬಿಲ್ ಕಲೆಕ್ಟರ್ ಬ್ಯಾಂಕಿಗೆ ಜಮಾ ಮಾಡಿ ರಸೀದಿಯನ್ನು ತಂದು ಕೊಡುತ್ತಾರೆ. ಖರ ವಸೂಲಾಗಿರುವುದು ಮತ್ತು ಬ್ಯಾಂಕಿಗೆ ಪಾವತಿ ಮಾಡಿರುವುದು ಟ್ಯಾಲಿ ಆಗುತ್ತದೆ ಎಂದರೆ 01-04-2022 ರಿಂದ 11-04-2022 ರವರೆಗೆ ಖರ ವಸೂಲಾಗಿರುವುದು ಮತ್ತು ಬ್ಯಾಂಕಿಗೆ ಪಾವತಿ ಮಾಡಿರುವುದು ಟ್ಯಾಲಿ ಆಗುತ್ತದೆ. ಬಂದಿರುವ ಹಣ ಮತ್ತು ಖರ ವಸೂಲಿಯ ಹಣ ಎರಡು ಟ್ಯಾಲಿ ಆಗುತ್ತದೆ ಎಂದರೆ ಸರಿಯಲ್ಲ. ಇನ್ನು ಹಣ ಇರುತ್ತದೆ. ಖರ್ಚನ್ನು ಮಾಡಲು ಮತ್ತು ಹಣವನ್ನು ಪಾವತಿಸುವ ಅಧಿಕಾರ ಪಿ.ಡಿ.ಒ.ದೇ ಎಂದರೆ ಸರಿಯಲ್ಲ. ಹಣವನ್ನು ಉಪಯೋಗಿಸುವ ಮತ್ತು ಡ್ರಾ ಮಾಡುವ ಅಧಿಕಾರ ಬಿಲ್ ಕಲೆಕ್ಟರ್ ಗೆ ಇಲ್ಲ ಎಂದರೆ ಸರಿ. ಬಿಲ್ ಕಲೆಕ್ಟರ್ ಗೆ ವೇತನ ಕೊಡುವ ಅಧಿಕಾರ ಪಿ.ಡಿ.ಒ. ಮತ್ತು ಅಧ್ಯಕ್ಷರಿಗೆ ಇದೆ ಎಂದರೆ ಸರಿ. ಬಿಲ್ ಕಲೆಕ್ಟರ್ ವೇತನ ಚೆಕ್ ಮೂಲಕ ನೇರವಾಗಿ ಅವರ ಅಕೌಂಟ್ ಗೆ ಜಮೆ ಆಗುತ್ತದೆ. ವೇತನ ಜಮೆ ಮಾಡಿರುವುದು ಖರ ವಸೂಲಿಯವರ ಪಾತ್ರ ಇಲ್ಲ ಎಂದರೆ ಸರಿಯಲ್ಲ.

ಫಲಾನುಭವಿಗಳನ್ನು ಗುರುತಿಸುವುದು, ಆಯ್ಕೆ ಮಾಡುವುದು ಮತ್ತು ಶಿಫಾರಸ್ಸು ಮಾಡುವುದು ಪಿ.ಡಿ.ಒ. ಮತ್ತು ಅಧ್ಯಕ್ಷರ ಅಧಿಕಾರ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿ. ಸ್ವತಃ ಮುಂದುವರೆದು ಹೇಳುತ್ತಾರೆ, ಗ್ರಾಮ ಸಭೆ ಮೂಲಕ ಫಲಾನುಭವಿಗಳನ್ನು ಆಯ್ಕೆ ಮಾಡುತ್ತೇವೆ. ಆಯ್ಕೆ ಮಾಡಿದ ಫಲಾನುಭವಿಗಳು ಅರ್ಹರು ಎಂದರೆ ಮಾತ್ರ ಗ್ರಾಮ ಸಭೆಯಲ್ಲಿ ಆಯ್ಕೆ ಮಾಡುತ್ತೇವೆ ಎಂದರೆ ಸರಿ.

ಈ ಸಭಾ ನಡವಳಿಕೆಯಲ್ಲಿ ಖರ ವಸೂಲಿದಾರರ ಪಾತ್ರ ಇಲ್ಲ ಎಂದರೆ ಸರಿ . ಖರ ವಸೂಲಿದಾರರು ಫಲಾನುಭವಿಗಳು ಆಯ್ಕೆ ಮಾಡುವ ವಿಚಾರದಲ್ಲಿ ಯಾವುದೇ ಶಿಫಾರಸ್ಸು ಮಾಡಿದರು ಕೂಡ ಅದನ್ನು ನಾವು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ ಎಂದರೆ ಸರಿ. 1 ನೇ ಆರೋಪಿ ತನ್ನ ತಾಯಿ ಹೆಸರಿನಲ್ಲಿ ಒಂದು ಮನೆ, ಲಕ್ಷ್ಮೀ ಹೆಸರಿನಲ್ಲಿ ನಿವೇಶನ ಮಂಜೂರಾಗಿರುವ ಬಗ್ಗೆ ಆರೋಪಿತರ ಪಾತ್ರ ಇಲ್ಲ ಎಂದರೆ ಸರಿ. ಮನೆ ಕಟ್ಟುವುದಕ್ಕೆ ಹಣ ಮತ್ತು ನಿವೇಶನ ಮಂಜೂರು ಮಾಡುವ ಕಾಲಕ್ಕೆ ಬಿಲ್ ಕಲೆಕ್ಟರ್ ರವರ ಪಾತ್ರ ಏನು ಇರುವುದಿಲ್ಲ ಎಂದರೆ ಸರಿ . ಇಲಾಖಾ ವಿಚಾರಣೆ ಆದ ನಂತರ 1 ನೇ ಆರೋಪಿ ಯಾವುದೇ ತಪ್ಪು ಮಾಡಿಲ್ಲ ಎಂದು ವರದಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಪೊಲೀಸರು ನಮ್ಮ ಕಚೇರಿಯಿಂದ ಯಾವುದೇ ದಾಖಲೆಗಳನ್ನು ತೆಗೆದುಕೊಂಡು ಹೋಗಿಲ್ಲ, ಯಾವುದೇ ಮಹಜರ್ ಕ್ರಮವನ್ನು ಜರುಗಿಸಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಬರವಣಿಗೆ ಮಾಡಿಲ್ಲ, ನಮ್ಮಗಳ ಸಹಿಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಕೊಟ್ಟಿರುವ ದೂರಿನಲ್ಲಿ ಯಾವುದೇ ಸತ್ಯಾಂಶವಿಲ್ಲ, ಸುಳ್ಳು ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ನಮ್ಮ ಪಂಚಾಯಿತಿಗೆ ಯಾವುದೇ ನಷ್ಟವನ್ನುಂಟು ಮಾಡಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಅಪರಾಹ್ನವಾದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮಧ್ಯಾಹ್ನ 3 ಗಂಟೆಗೆ ಮುಂದೂಡಲಾಯಿತು.

**<u>ಪಾಟೀ ಸವಾಲುಃ</u>- 2 ನೇ ಆರೋಪಿ ಪರವಾಗಿ ಶ್ರೀ.ಆರ್.ಆರ್. ವಕೀಲರಿಂದಃ-**

ನಾನು ಪಿ.ಡಿ.ಒ. ಕೆಲಸಕ್ಕೆ ಸೇರಿ 10 ವರ್ಷವಾಗಿದೆ. ನಾನು ನಾಲ್ಕು ಕಡೆ ಪಿ.ಡಿ.ಒ. ಆಗಿ ಕೆಲಸ ಮಾಡಿದ್ದೇನೆ. ನಮ್ಮ ಕೈ ಕೆಳಗಡೆ ಸುಮಾರು 10-15 ಜನ ಕೆಲಸ ಮಾಡುತ್ತಿದ್ದಾರೆ. ಡ್ರಾಯಿಂಗ್ ಆಫೀಸರ್ ನಾನೇ ಆಗಿರುತ್ತೇನೆ. ಯಾವುದೇ ಎಲೆಕ್ಟ್ರಿಕ್ ಮೆಟೀರಿಯಲ್ಸ್ ಅಥವಾ ಬೇರೆ ಮೆಟೀರಿಯಲ್ಸ್ ನ್ನು ಪಂಚಾಯಿತಿಗೆ ತರಿಸಿಕೊಂಡಾಗ ಅವರಿಗೆಲ್ಲಾ ಬಿಲ್ ನಾನೇ ತಯಾರು ಮಾಡುತ್ತೇನೆ ಎಂದರೆ ಸರಿ. ಪಂಚಾಯಿತಿ ಸಿಬ್ಬಂದಿಗೆ ವೇತನವನ್ನು ಚೆಕ್ ಮತ್ತು ಆನ್ ಲೈನ್ ಮೂಲಕ ವರ್ಗಾವಣೆ ಮಾಡುತ್ತೇವೆ. ದಿನಾಂಕಃ 03-08-2021 ರಂದು 2 ನೇ ಆರೋಪಿಯು 1 ನೇ ಆರೋಪಿಗೆ ಒಟ್ಟು 8 ತಿಂಗಳ ವೇತವನ್ನು ಮಾಡಿಕೊಟ್ಟಿದ್ದಾರೆ. ಯಾರಿಗಾದರೂ ಹೆಚ್ಚು ಹಣವನ್ನು ಕೊಟ್ಟಿದ್ದ ಸಂಧರ್ಭದಲ್ಲಿ ಅದನ್ನು ಆ ವ್ಯಕ್ತಿಯಿಂದ ರಿಕವರಿ ಮಾಡಿ ಅದನ್ನು ಪಂಚಾಯಿತಿಗೆ ಡೆಪಾಸಿಟ್ ಮಾಡಿಸಿಕೊಳ್ಳುತ್ತೇವೆ. ಆ ರೀತಿ ತಪ್ಪು ಕೆಲವೊಮ್ಮೆ ಆಗುತ್ತದೆ. ಬೈ ಮಿಸ್ ಟೇಕ್ ಹೆಚ್ಚುವರಿ ಸ್ಯಾಲರಿ ಬಿಲ್ ಆಗಿದ್ದಾಗ ಅದನ್ನು ರಿಕವರಿ ಮಾಡುತ್ತೇವೆ. ದಿನಾಂಕಃ 31-03-2022 ರಂದು 2 ನೇ ಆರೋಪಿ ಹೆಚ್ಚುವರಿ ತೆಗೆದುಕೊಂಡ ವೇತನವನ್ನು ನಮ್ಮ ಗ್ರಾಮ ಪಂಚಾಯಿತಿ ಖಾತೆ ಇರುವ ಎಸ್.ಬಿ.ಐ.ಗೆ ಜಮೆ ಮಾಡಿದ್ದಾರೆ ಎಂದರೆ ಕ್ಯಾಷ್ ಬುಕ್ಕನ್ನು ಚೆಕ್ ಮಾಡಿಕೊಂಡು ಹೇಳುತ್ತೇನೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ